ತಲುಬು ನಿಲ್ಲುವುದಿಲ್ಲ. ಅದು ಮತ್ತಷ್ಟು ಮಗದಷ್ಟು ದುಪ್ಪಟ್ಟಾಗುತ್ತಲೇ ಇರುತ್ತದೆ. ಮೊದಲು ಹುಲಿ ಬೇಟೆಯಾಡಿ ಹೆಸರು ಗಳಿಸುವ ಖಯಾಲಿಯಿದ್ದ ಕೋವಿ ಕೈಗಳಿದ್ದವು. ಆದರೀಗ ಕಾಲ ಬದಲಾಗಿ ಹೋಗಿದೆ. ಕ್ಯಾಮೆರಾ ಹಿಡಿದ ಅತಿ ವ್ಯಸನಿಗಳು ನಿಮಗೀಗ ಸಿಗುತ್ತಾರೆ.

ಸಾಧಾರಣವಾಗಿ ಹುಲಿ ಕಾಡಿನಲ್ಲಿ ಕಂಡ ತಕ್ಷಣ ಬಹುತೇಕ ಪಟಗಾರರು ಭಾವೋದ್ವೇಗಕ್ಕೆ ಒಳಗಾಗುತ್ತಾರೆ. ಸಡಗರದಲ್ಲಿ ತಮ್ಮ ಕಣ್ಣು, ಮೂಗು, ನಾಲಗೆ, ಗಂಟಲು ಎಲ್ಲವನ್ನೂ ಕೆಂಪಾಗಿಸಿಕೊಳ್ಳುತ್ತಾರೆ. ಕೆಲವರಲ್ಲಿ ಹುಚ್ಚಾಪಟ್ಟೆ ಆವೇಶವು ಹುಟ್ಟಿ ವಿಕಾರವಾಗಿ ನಡೆದುಕೊಳ್ಳುತ್ತಾರೆ. ಮೌನವಾಗಿದ್ದು ತಣ್ಣಗೆ ಆಸ್ವಾದಿಸುವವರು ಕಡಿಮೆ. ಅದೇ ಕೆಲ ಹೊಸಬರು ಹುಲಿ ನೋಡಿ ಕಿರುಚಾಡುವುದು, ಪ್ರಾಣವೇ ಹಾರಿ ಹೋದಂತೆ ಚಡಪಡಿಸುವುದೂ ಆಗಿದೆ. ಉಚ್ಚೆ ಹೊಯ್ದುಕೊಂಡ, ಪ್ರಜ್ಞೆ ತಪ್ಪಿದವರಿಗೂ ಇಲ್ಲಿ ಬರವಿಲ್ಲ. ನುರಿತ ಪಟಗಾರ ಮಾತ್ರ ಒಳ್ಳೆಯ ಚಿತ್ರವೊಂದನ್ನು ಕ್ಲಿಕ್ಕಿಸುವ ಇರಾದೆಯಲ್ಲಿರುತ್ತಾನೆ. ಸೂಕ್ತ ಸಮಯಕ್ಕಾಗಿ ಆತ ಕಾಯುತ್ತಾನೆ. ಕೆಲ ಗಾಬರಿ ಪ್ರವೃತ್ತಿಯವರಿಗೆ ಎಲ್ಲಿ ಸಿಕ್ಕ ಅವಕಾಶ ತಪ್ಪಿ ಹೋಗಿಬಿಡುತ್ತದೆಯೋ? ಎಂಬ ಹೆದರಿಕೆ. ಇಂಥವರೂ ಮಾತ್ರ ಕಾರಣವೇ ಇಲ್ಲದೆ ಪಿತ್ತ ನೆತ್ತಿಗೇರಿಸಿಕೊಂಡು ಎಲ್ಲರ ಮೂಡ್ ಹಾಳು ಮಾಡಬಲ್ಲ ನಿಸ್ಸೀಮರು.

ಮತ್ತೊಂದಿಷ್ಟು ಮಂದಿ ಹುಲಿ ಚಿತ್ರವನ್ನು ಹೀಗೆ ತೆಗೆಯಬೇಕು ಎಂಬ ಖಯಾಲಿಯಲ್ಲಿರುತ್ತಾರೆ. ಹುಲಿ ನಮ್ಮೆದುರಿಗೆ ತಲೆಯೆತ್ತಿ ರಾಜಗಾಂಭೀರ್ಯದಲ್ಲಿ ನಡೆದುಕೊಂಡು ಬರಬೇಕು. ಆಗ ಅಡಚಣೆಯಾಗಿ ಹಿಂದೆ ಮುಂದೆ ಯಾವ ಗಿಡಗಂಟೆಗಳು, ಜೀಪುಗಳು, ಜನರ ತಲೆಗಳು ಅಡ್ಡಬರಬಾರದು ಎಂಬ ನಿರೀಕ್ಷೆ ಇವರಲ್ಲಿ ಹೆಚ್ಚಿರುತ್ತದೆ. ಮತ್ತೊಂದಿಷ್ಟು ಜನ ದೆವ್ವ ಮೈಯಲ್ಲಿ ಹೊಕ್ಕವರಂತೆ, ತಕಪಕ ಕುಣಿಯತೊಡಗುತ್ತಾರೆ. ಜೀಪು ಇಳಿಯಲು ಬಿಟ್ಟರೆ ಇನ್ನೇನು ಹೋಗಿ ಹುಲಿ ಹಿಡಿದು ಚಕಚಕ ಎಂದು ಮುತ್ತು ಕೊಡುವಷ್ಟು ಇವರಲ್ಲಿ ಉನ್ಮಾದ ಹುಟ್ಟುತ್ತದೆ. ಮೈಮೇಲಿನ ದ್ಯಾಸವೇ ಇಲ್ಲದೇ ಜೀಪಲ್ಲಿ ಕೂತವರ ಮೈಮೇಲೆ ಕಾಲಿಟ್ಟು ನಡೆದುಬಿಡುತ್ತಾರೆ. ಮೂಗಿನ ಹೊಳ್ಳೆಗಳ ಬಸು ಬುಸು ಎಳೆದುಕೊಂಡು ಹೃದಯದ ಬಡಿತ ಹೆಚ್ಚಿಸಿಕೊಂಡು ಅಂಕೆಗೆ ಸಿಗದೇ ಒದ್ದಾಡುವ ಜನರನ್ನು ಹುಲಿ ಕರುಣೆಯಿಂದ ನೋಡಿ ಸುಮ್ಮನಾಗಿರಬಹುದು. ಇಂಥ ಹಲವು ಅತಿರೇಕಗಳೆಲ್ಲ ಹುಲಿಯನ್ನು ಕಾಡಲ್ಲಿ ಕಂಡ ಕೆಲ ಕ್ಷಣಗಳಲ್ಲೇ ನಡೆದು ಹೋಗುತ್ತದೆ. ನಾನು ಹುಲಿಯ ಚಿತ್ರ ಬಿಟ್ಟು ಇಂತಹ ರಾದ್ಧಾಂತಗಳನ್ನೇ ಹೆಚ್ಚು ಗಮನಿಸುವ ಮತಿಗೇಡಿಯಾಗುತ್ತೇನೆ.

ಬಹಳ ಹಿಂದೆ ಸಿಕ್ಕಿದ್ದ ಗೆಳೆಯ ಗೌರೀಶ್ ಕಪನಿ, 'ನಾನು ವೈಲ್ಡ್ ಲೈಫ್ ಫೋಟೊಗ್ರಫಿ ಬೇಜಾರಾಗಿ ಕೈ ಬಿಟ್ಟಿದ್ದಿನಿ ಕಂಡ್ರಿ. ಅದರಲ್ಲೂ ಈ ಸಫಾರಿ ಫೋಟೊಗ್ರಫಿ ಒಂತರ ಕ್ರೈಂ. ಪದೇ ಪದೇ ಹೋಗಿ ಪ್ರಾಣಿಗಳ ಖಾಸಗಿ ಬದುಕಿಗೆ ತೊಂದರೆ ಕೊಡ್ತಾ ಇದ್ದೀರಾ ಅಂತ ನಿಮಗೆಲ್ಲಾ ಅನ್ನೋದಿಲ್ವಾ? ಅಸಹ್ಯ ಅನ್ನಿ ಥುತ್ ಇದರ ಸಾವಾಸನೆ ಬ್ಯಾಡ ಅಂತೇಳಿ ಕ್ಯಾಮೆರಾನೂ ಮಾರಿ ತಣ್ಣಗೆ ಕೂತಿದೀನಿ. ಈಗೀಗಂತು ಕನಿಷ್ಠ ನೈತಿಕತೆ ಇಲ್ದಿರೋ ಜನರೆಲ್ಲಾ ಕ್ಯಾಮೆರಾ ಎತ್ಕೊಂಡು ಬರ್ತಾ ಇದ್ದಾರೆ. ಕೆಟ್ಟ ಶೋಕಿ ಇದು. ಫೋಟೊಗ್ರಫಿ ಮಾಡಿ ಯಾವುದಾದರೂ ಪ್ರಾಣಿ- ಪಕ್ಷಿಗಳ ಬದುಕನ್ನು ಸಂರಕ್ಷಣೆ ಮಾಡಕಾಗುತ್ತೇನ್ರಿ? ಅವುಗಳ ಪಾಡಿಗೆ ಅವು ಸ್ವತಂತ್ರವಾಗಿ ಇರೋದಕ್ಕೆ ಬಿಡೋದೇ ನಾವು ಮಾಡೋ ದೊಡ್ಡ ಉಪಕಾರ ಅಲ್ವಾ' ಎಂದನು. 'ತಮಗೂ ಜುಗುಪ್ಸೆ ಹುಟ್ಟಿದ್ದು ರಣಹದ್ದು ಸುತ್ತೋ ಥರ ಇಡೀ ಇಂಡಿಯಾದ ಹುಲಿ, ಚಿರತೆ, ಆನೆ, ಹಿಂಡು ಕೊಳ್ಳೆ ಹೊಡೆದ ಮೇಲಲ್ಲವೇ ಬಂದಿದ್ದು ಸಾಹೇಬರೇ' ಎಂದು ಹೇಳಿ ಚಿಗುಟಿ ಕೈಬಿಟ್ಟಿದ್ದೇನೆ. ಎಲ್ಲವೂ ಸಾಕು ಎನಿಸಿದ ಮೇಲೆ ಬರುವ ವೈರಾಗ್ಯಕ್ಕೆ ಯಾವ ಬೆಲೆಯಿದೆ?.

ಹುಲಿಯ ಹಿಂಬಾಲಿಸುವ ಜನರ ಕೆಲವು ಅಚ್ಚರಿ ಹುಟ್ಟಿಸುವ ವಿಷಯಗಳನ್ನು ಇಲ್ಲಿ ಹೇಳಬೇಕು. ನೀವು ನಂಬಲ್ಲ ಈ ದುಶ್ಚಟಕ್ಕೆ ಬಿದ್ದು ಮದುವೆಯೇ ಆಗದ ಭೂಪರೂ ಕೆಲವರಿದ್ದಾರೆ. ತಿಂಗಳಲ್ಲಿ ಹತ್ತು ಹದಿನೈದು ದಿನ ಬಂದಿದ್ದು ದುಡಿದ ದುಡಿಮೆಯೆಲ್ಲಾ ಸಫಾರಿಗೆ ಸುರಿದು ಜೇಬು ಖಾಲಿ ಮಾಡಿಕೊಂಡು ಮತ್ತೆ ಓಡುವ ಧೈರ್ಯವಂತರಿದ್ದಾರೆ. ಕೆಲವರಂತೂ ವ್ಯಾಘ್ರಗಳ ಕಾಣುವ ಹಪಹಪಿಯಲ್ಲಿ ಮನೆಮಠ ಬಿಟ್ಟು ನಿರುಮ್ಮಳವಾಗಿದ್ದಾರೆ. ಇವರನ್ನು ನಾನು ಮಾತಾಡಿಸಿ ಗೆಳೆಯರನ್ನಾಗಿಯೂ ಮಾಡಿಕೊಂಡಿದ್ದೇನೆ. ಸಂಸಾರ ತೊರೆದು ಕಾಡ ಸನ್ಯಾಸಿಗಳಾಗಿ ಅಲೆಯುತ್ತಿರುವ